# ಕರ್ನಾಟಕರಾಜ್ಯಡಾ. ಗಂಗೂಬಾಯಿಹಾನಗಲ್
# ಸಂಗೀತಮತ್ತುಪ್ರದರ್ಶಕಕಲೆಗಳವಿಶ್ವವಿದ್ಯಾಲಯ, ಮೈಸೂರು

ಸರ್ದಾರ್ ವಲ್ಲಭಬಾಯಿಪಟೇಲ್ ನಗರ
ನಾದನಹಳ್ಳಿ, ಮೈಸೂರು-570029.
ದೂರವಾಣಿ: 0821-2332703,
Email :musicuniversitymys@gmail.com

SardharVallabhabiPateel Nagar
NadanahalliMysuru – 570029
Ph.Office: 0821-2332703,
Website: https://www.musicuniversity.ac.in


ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/52 ನೇ ಸ ಸ ನಡಾವಳಿ /2026-27

ದಿನಾಂಕ:25-06-2026

## 52 ನೇ ಸಿಂಡಿಕೇಟ್ ಸಭೆಯ ಸಭಾ ನಡಾವಳಿ

ಕರ್ನಾಟಕ ರಾಜ್ಯ ಡಾ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಬಲ್ಲಾಳ ವೃತ್ತದ ಲಕ್ಷ್ಮೀಪುರ ಕ್ಯಾಂಪಸ್‌ನಲ್ಲಿರುವ ಮಾನ್ಯ ಕುಲಪತಿಗಳ ಕಛೇರಿಯಲ್ಲಿ ದಿನಾಂಕ:25-06-2026 ರ ಗುರುವಾರದಂದು ಬೆಳಿಗ್ಗೆ 11.00 ಗಂಟೆಗೆ 52ನೇ ಪ್ರಶಾಸನ (ಸಿಂಡಿಕೇಟ್) ಸಭೆಯನ್ನು ಆಯೋಜಿಸಲಾಗಿದ್ದು ಸದರಿ ಸಭೆಯ ಸದಸ್ಯರ ಹಾಜರಾತಿ ವಿವರ ಹಾಗೂ ಸಭಾ ನಡಾವಳಿ

| ಕ್ರ. ಸಂ. | ಹೆಸರುಮತ್ತುವಿಳಾಸ | ಪದನಾಮ | ಸಹಿ /- |
|---|---|---|---|
| 01 | ಪ್ರೊ. ರಾಮಕೃಷ್ಣಯ್ಯಕೆ<br>ಮಾನ್ಯಕುಲಪತಿಗಳು, | ಅಧ್ಯಕ್ಷರು | ಹಾಜರು |
| 02 | ಸರ್ಕಾರದ ಅಪರ ಮುಖ್ಯ ಜಂಟಿ ಕಾರ್ಯದರ್ಶಿಯವರ ಪರವಾಗಿ<br>ಶ್ರೀಯುತ ಕುಮಾರ್ ರವರು ,ಉನ್ನತ ಶಿಕ್ಷಣಇಲಾಖೆ, ಕರ್ನಾಟಕ ಸರ್ಕಾರ,ಬಹುಮಹಡಿ ಕಟ್ಟಡ, ಬೆಂಗಳೂರು | ಸದಸ್ಯರು | ಹಾಜರು |
| 03 | ಸರ್ಕಾರದ ಮುಖ್ಯ ಜಂಟಿ ಕಾರ್ಯದರ್ಶಿಯವರ ಪರವಾಗಿ ಶ್ರೀಮತಿ ಶೋಭಾ ಹೆಚ್ ಎ ರವರು,ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ಬಹುಮಹಡಿ ಕಟ್ಟಡ,ಬೆಂಗಳೂರು | ಸದಸ್ಯರು | ಹಾಜರು |
| 04 | ಶ್ರೀ ಹೆಚ್ ಎಸ್ ಗೋಪಿನಾಥ್ ರವರು<br>ಸಿಂಡಿಕೇಟ್ ಸದಸ್ಯರು,ನಂ-1138, 14 ನೇಮುಖ್ಯರಸ್ತೆ, 3 ನೇಹಂತ, ಹೆಚ್ ಎಸ್ ಆರ್ ಲೇಔಟ್, ಬೆಂಗಳೂರು-01 | ಸದಸ್ಯರು | ಹಾಜರು |
| 05 | ಡಾ.ಎಂ. ವಿಶ್ವನಾಥಯ್ಯ,<br>ಸಿಂಡಿಕೇಟ್ ಸದಸ್ಯರು,ನಂ-22, ಬಾಂಧವ್ಯ, 1 ನೇಮೇನ್ ರೋಡ್,<br>ಸಪ್ತಗಿರಿರೆಸಿಡೆನ್ಸಿ, ಸುಬ್ರಹ್ಮಣ್ಯಪುರಂ ,ಬೆಂಗಳೂರು-56006. | ಸದಸ್ಯರು | ಹಾಜರು |
| 06 | ಶ್ರೀಮತಿ. ಎನ್. ದೀಪಿಕ<br>ಸಿಂಡಿಕೇಟ್ ಸದಸ್ಯರು,2119 , ಹಂಪಿನಗರ, 2 ನೇಹಂತ,<br>7 ನೇಕ್ರಾಸ್, ವಿಜಯನಗರಬೆಂಗಳೂರು – 40 | ಸದಸ್ಯರು | ಹಾಜರು |
| 07 | ಶ್ರೀಮಲ್ಲಿಕಾರ್ಜುನ ಸ್ವಾಮಿ<br>ಸಿಂಡಿಕೇಟ್ ಸದಸ್ಯರು, ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡಭವನ, ಜೆಸಿರಸ್ತೆ, ಮೈಸೂರು | ಪದನಿಮಿತ್ತ ಸದಸ್ಯರು | ಹಾಜರು |
| 08 | ಶ್ರೀಮತಿ ಸೌಮ್ಯಶ್ರೀ ಸಿ.ಪಿ<br>ಹಣಕಾಸು ಅಧಿಕಾರಿಗಳು | ಸದಸ್ಯರು | ಹಾಜರು |
| 09 | ಪ್ರೊ ಎಂ.ಜಿ ಮಂಜುನಾಥ<br>ಕುಲಸಚಿವರುಮೌಲ್ಯಮಾಪನ ಹಾಗೂ ಕುಲಸಚಿವರು (ಪ್ರಭಾರ) | ಸದಸ್ಯ ಕಾರ್ಯದರ್ಶಿ | ಹಾಜರು |

ಕುಲಸಚಿವರು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ
ಮೈಸೂರು
25/6/26

ಕಾರ್ಯಸೂಚಿ.

| ಕ್ರ ಸಂ | ವಿಷಯ |
|---|---|
| ವಿಷಯ ಸಂಖ್ಯೆ-1 | ದಿನಾಂಕ:10-04-2026 ರಂದು ನಡೆದ 51 ನೇ ಸಿಂಡಿಕೇಟ್ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗ್ಗೆ |
| ನಿರ್ಣಯ | ದಿನಾಂಕ:10-04-2026 ರಂದು ನಡೆದ 51 ನೇ ಸಿಂಡಿಕೇಟ್ ಸಭೆಯ ನಡಾವಳಿಯ ನಿರ್ಣಯಗಳನ್ನು ಚರ್ಚಿಸಿ ಸಭೆಯು ಸ್ಥಿರೀಕರಿಸಿತು. |
| ವಿಷಯ ಸಂಖ್ಯೆ 2 | 2026-27 ನೇ ಸಾಲಿನ ಆಯವ್ಯಯ ಅನುಮೋದನೆ. |
| ನಿರ್ಣಯ | 2026-27 ನೇ ಸಾಲಿನ ಆಯವ್ಯಯವನ್ನು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 3 | ದಿನಾಂಕ: 27-05-2026 ರಂದು ಜರುಗಿದ 31 ನೇ ಹಣಕಾಸು ಸಮಿತಿ ನಡಾವಳಿಯನ್ನು ಸ್ಥಿರೀಕರಿಸುವುದು. |
| ನಿರ್ಣಯ | ದಿನಾಂಕ: 27-05-2026 ರಂದು ಜರುಗಿದ 31 ನೇ ಹಣಕಾಸು ಸಮಿತಿ ನಡಾವಳಿಯನ್ನು ಸಭೆಯು ಚರ್ಚಿಸಿ ಅನುಮೋದಿಸಿತು. |
| ವಿಷಯ ಸಂಖ್ಯೆ 4 | 2026-27 ನೇ ಸಾಲಿಗೆ ವಿಶ್ವವಿದ್ಯಾಲಯದೊಡನೆ ನೂತನ ಒಡಂಬಡಿಕೆಗಾಗಿ ಅರ್ಜಿ ಸಲ್ಲಿಸಿರುವ ಈ ಕೆಳಕಂಡ ಶಿಕ್ಷಣ ಸಂಸ್ಥೆಗಳ ಒಡಂಬಡಿಕೆಯನ್ನು ಅನುಮೋದಿಸುವ ಬಗ್ಗೆ.<br>1. ಕರ್ನಾಟಕ ಜಾನಪದ ಪರಿಷತ್ತು, ರಾಮನಗರ<br>2. ಸಂಚಾರಿ ಕಲಾ ಪರಿಷದ್, ನಾಗರಬಾವಿ, ಬೆಂಗಳೂರು<br>3. ಶ್ರೀ ವಾಗ್ದೇವಿ ಗಮಕ ಕಲಾ ಪ್ರತಿಷ್ಠಾನ (ರಿ ), ಬೆಂಗಳೂರು<br>4. ಸ್ಫೂರ್ತಿ ಎಜುಕೇಷನ್ ಟ್ರಸ್ಟ್ ದಾವಣಗೆರೆ<br>5. ಸೆಂಟ್ ಕ್ಲಾರೆಟ್ ಕಾಲೇಜು ಅಟನಮಸ್ ಕಾಲೇಜ್ ಬೆಂಗಳೂರು |
| ನಿರ್ಣಯ | ಮೇಲ್ಕಂಡ ಐದು ಶಿಕ್ಷಣ ಸಂಸ್ಥೆಗಳ ಒಡಂಬಡಿಕೆಯನ್ನು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 5 | ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪಕ್ಕದಲ್ಲಿರುವ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿರುವ ಸುಮಾರು 19 ಎಕರೆ ಸ್ಥಳವನ್ನು ನಮ್ಮ ವಿವಿಗೆ ನೀಡಲು ಮನವಿ ಮಾಡುವ ಬಗ್ಗೆ. |
| ನಿರ್ಣಯ | ನೂತನ ಕ್ಯಾಂಪಸ್ ಪಕ್ಕದಲ್ಲಿರುವ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿರುವ ಸುಮಾರು 19 ಎಕರೆ ಸ್ಥಳವನ್ನು ನಮ್ಮ ವಿವಿಗೆ ನೀಡಲು ಮನವಿ/ಪ್ರಸ್ತಾವನೆ ಕಳುಹಿಸಲು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ-6 | ಸರ್ಕಾರದಿಂದ ನಮ್ಮ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿರುವ, ನಮ್ಮ ಸ್ವಾಧಿನಾನುಭವದಲ್ಲಿರುವ ಹುಣಸೂರು ತಾಲೂಕು, ಬಿಳಿಕೆರೆ ಹೋಬಳಿ, ಧರ್ಮಾಪುರ ಗ್ರಾಮದಲ್ಲಿರುವ 65 ಎಕರೆ ಜಮೀನಿಗೆ ಹದ್ದು ಬಸ್ತು ನಿರ್ಮಿಸಿ ತಂತಿ ಬೇಲಿ ನಿರ್ಮಿಸುವ ಬಗ್ಗೆ. |

ಕುಲಸಚಿವರು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು - 570 004

ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ
ಮೈಸೂರು

| | |
|---|---|
| ನಿರ್ಣಯ | ಸರ್ಕಾರದಿಂದ ನಮ್ಮ ವಿಶ್ವವಿದ್ಯಾಲಯಕ್ಕೆ ಮಂಜೂರಾಗಿ ನಮ್ಮ ಸ್ವಾಧೀನಾನುಭವದಲ್ಲಿರುವ ಹುಣಸೂರು ತಾಲೂಕು, ಬಿಳಿಕೆರೆ ಹೋಬಳಿ, ಧರ್ಮಾಪುರ ಗ್ರಾಮದಲ್ಲಿರುವ 65 ಎಕರೆ ಜಮೀನಿಗೆ ಹದ್ದು ಬಸ್ತು ನಿರ್ಮಿಸಿ ತಂತಿ ಬೇಲಿ ನಿರ್ಮಿಸಲು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 7 | ಕಾನೂನು ಸಲಹೆಗಾರರು ಮತ್ತು ವಿವಿಯ ಸರ್ಕಾರಿ ಕಛೇರಿಗಳಲ್ಲಿ ವ್ಯವಹರಿಸಲು ಲೈಸನ್ ಆಫೀಸರ್‌ಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳುವ ಬಗ್ಗೆ. |
| | ಕಾನೂನು ಸಲಹೆಗಾರರು ಮತ್ತು ವಿವಿಯ ಸರ್ಕಾರಿ ಕಛೇರಿಗಳಲ್ಲಿ ವ್ಯವಹರಿಸಲು ಅನುಭವಿ ಸಿಬ್ಬಂದಿಗಳನ್ನು ವಿವಿಯ ಲೈಸನ್ ಆಫೀಸರ್‌ಗಳನ್ನಾಗಿ ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 8 | ವಿವಿಗೆ ಸುಸಜ್ಜಿತವಾದ ರಂಗಮಂದಿರ ಇಲ್ಲದಿರುವುದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಸಂಸ್ಕೃತಿ ಇಲಾಖೆಗಳಿಗೆ ರಂಗಮಂದಿರ ಮತ್ತು ವಸ್ತು ಸಂಗ್ರಹಾಲಯ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಕೋರಿ ಅರ್ಜಿ ಸಲ್ಲಿಸಲು ಅನುಮತಿ ಕೋರುವ ಬಗ್ಗೆ. |
| ನಿರ್ಣಯ | ವಿವಿಗೆ ಸುಸಜ್ಜಿತವಾದ ರಂಗಮಂದಿರ ಇಲ್ಲದಿರುವುದರಿಂದ ರಂಗಮಂದಿರ ಮತ್ತು ವಸ್ತು ಸಂಗ್ರಹಾಲಯ ಕಟ್ಟಡ ನಿರ್ಮಾಣಕ್ಕೆ ಧನಸಹಾಯ ಕೋರಿ ಅರ್ಜಿ ಸಲ್ಲಿಸಲು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 9 | ವಿವಿಯ ಸರ್ದಾರ್ ವಲ್ಲಭಬಾಯಿ ಪಟೇಲ್‌ನಗರದ ನೂತನ ಕ್ಯಾಂಪಸ್‌ನಲ್ಲಿ ತರಗತಿಗಳು ಕಳೆದ ಶೈಕ್ಷಣಿಕ ಸಾಲಿನಿಂದ ಆರಂಭಿಸಿದ್ದು ಅಲ್ಲಿನ ಮೂಲಭೂತ ಸಮಸ್ಯೆಗಳಿಂದ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿಗಳು ನಮ್ಮ ಹಳೆಯ ಕ್ಯಾಂಪಸ್‌ನಲ್ಲಿ ತರಗತಿ ನಡೆಸಲು ಮನವಿ ಮಾಡಿರುವ ಬಗ್ಗೆ, ಹಾಗೂ ಸದರಿ ನಿವೇಶನದಲ್ಲಿ ವಿದ್ಯಾರ್ಥಿಗಳ ವಸತಿ ನಿಲಯ ನಿರ್ಮಾಣದ ಬದಲಿಗೆ ತರಗತಿ ಕೊಠಡಿಗಳು, ಗ್ರಂಥಾಲಯ ಮತ್ತು ಸಿಬ್ಬಂದಿ ಕೊಠಡಿಗಳನ್ನು ನಿರ್ಮಿಸುವ ಬಗ್ಗೆ. |
| ನಿರ್ಣಯ | ಸದರಿ ವಿಷಯವನ್ನು ಸಭೆಯು ಚರ್ಚಿಸಿ ಎರಡನೇ ಹಂತದ ಕಾಮಗಾರಿಯು ಪೂರ್ಣಗೊಳ್ಳುವ ವರೆಗೆ ಅಥವಾ ಆರು ತಿಂಗಳ ಅವಧಿಗೆ ಸಿಟಿ ಕ್ಯಾಂಪಸ್‌ಗೆ ಸ್ಥಳಾಂತರಿಸಿ ತರಗತಿಗಳನ್ನು ನಡೆಸಲು ಅನುಮೋದಿಸಿತು.<br>ನೂತನ ಕ್ಯಾಂಪಸ್ ಆವರಣದಲ್ಲಿ ಪ್ರಸ್ತುತ ಇರುವ ಕೊಠಡಿಗಳು ತುಂಬಾ ಕಿರಿದಾಗಿದ್ದು ವಿದ್ಯಾರ್ಥಿಗಳ ತಾಲೀಮುಗಳಿಗೆ ಸಮಸ್ಯೆ ಉಂಟಾಗುತ್ತಿದ್ದು ಇದನ್ನು ಸಭೆಯಲ್ಲಿ ಚರ್ಚಿಸಲಾಯಿತು. ಪ್ರಸ್ತುತ ಆರಂಭಗೊಳ್ಳಲಿರುವ ವಸತಿನಿಲಯದ ಕಾಮಗಾರಿಯ ಬದಲಿಗೆ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾಗಿರುವ ತರಗತಿ ಕೊಠಡಿಗಳು, ಗ್ರಂಥಾಲಯ, ತಾಲೀಮು ಕೊಠಡಿ ಮತ್ತು ಸಿಬ್ಬಂದಿ ಕೊಠಡಿಗಳನ್ನು ನಿರ್ಮಾಣ ಮಾಡಲು ತೀರ್ಮಾನಿಸಿ ಸದರಿ ಪ್ರಸ್ತಾವನೆಯನ್ನು ಸರ್ವಾನುಮತದಿಂದ ಅನುಮೋದಿಸಿದರು. |
| ವಿಷಯ ಸಂಖ್ಯೆ 10 | ವಿಶೇಷ ಸಂಗೀತ ನೃತ್ಯ ತಾಳವಾದ್ಯ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಪ್ರವೇಶಾತಿ ನೊಂದಣಿಯನ್ನು ಕನಿಷ್ಠ ಆರು ತಿಂಗಳ ಮುಂಚಿತವಾಗಿ ಮಾಡಿಕೊಳ್ಳುವ ಬಗ್ಗೆ. |

ಕುಲಪತಿಗಳು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು - 570 004

ಕುಲಸಚಿವರು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ
ಮೈಸೂರು

| | |
|---|---|
| ನಿರ್ಣಯ | ಪ್ರಸ್ತುತ ವಿವಿಯು ನಡೆಸುತ್ತಿರುವ ವಿಶೇಷ ಸಂಗೀತ ನೃತ್ಯ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಆರು ತಿಂಗಳ ಮೊದಲೇ ಪ್ರವೇಶಾತಿ ಪಡೆಯಲು ಸಭೆಯು ಅನುಮೋದಿಸಿತು. |
| ವಿಷಯ ಸಂಖ್ಯೆ 11 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:<br>* ಸವಿತಾ ಸಮಾಜದ ಪಾರಂಪರಿಕ ಕಲೆಗಳಾದ ಡೋಲು ನಾದಸ್ವರ ಕೋರ್ಸ್‌ಗಳನ್ನು ಮೈಸೂರಿನಲ್ಲಿಯೂ ಆರಂಭಿಸುವ ಬಗ್ಗೆ. |
| ನಿರ್ಣಯ | • ಸವಿತಾ ಸಮಾಜದ ಪಾರಂಪರಿಕ ಕಲೆಗಳಾದ ಡೋಲು, ನಾದಸ್ವರ ಕೋರ್ಸ್‌ಗಳನ್ನು ಮೈಸೂರಿನಲ್ಲಿಯೂ ಆರಂಭಿಸುವ ಬಗ್ಗೆ ದಿನಾಂಕ: 29-06-2026 ರಂದು ನಡೆಯುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಭೆಯಲ್ಲಿ ಪ್ರಸ್ತಾಪಿಸುವುದಾಗಿ ಕುಲಪತಿಗಳು ಸಭೆಗೆ ತಿಳಿಸಿದರು. ಈ ವಿಷಯವನ್ನು ಸಭೆಯು ಚರ್ಚಿಸಿ ಸದರಿ ಪ್ರಸ್ತಾವನೆಯನ್ನು ಸರ್ಕಾರದ ಗಮನಕ್ಕೆ ತಂದು ಕ್ರಮ ಕೈಗೊಳ್ಳಲು ಅನುಮೋದಿಸಿತು. ಹಾಗೆಯೇ ಸದರಿ ಕೆಲಸಗಳನ್ನು ಉತ್ತೇಜಿಸಲು ವಿವಿಯ ಪ್ರಯತ್ನ ಉತ್ತಮವಾಗಿದೆ ಹಾಗೂ ಇದರಿಂದ ವಿವಿಯ ವಿದ್ಯಾರ್ಥಿಗಳ ಪ್ರಮಾಣ ಹೆಚ್ಚಾಗುತ್ತದೆ ಎಂದು ಸಭೆಯು ಅಭಿಪ್ರಾಯ ಪಟ್ಟಿತು. |

ಸಭೆಯಲ್ಲಿ ಪಾಲ್ಗೊಂಡಿದ್ದ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ಪ್ರಭಾರ ಕುಲಸಚಿವರು ವಂದನೆಗಳನ್ನು ಅರ್ಪಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವರು(ಪ್ರಭಾರ)
ಕುಲಸಚಿವರು
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು - 570 004

ಮಾನ್ಯ ಕುಲಪತಿಗಳು
ಕುಲಪತಿ
ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್
ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ
ಮೈಸೂರು